ಹೇಳಿದರು. ಅವರೊಬ್ಬರನ್ನು ಬೇರ್ಪಡಿಸಿ ಅಲ್ಲಿ ಕೂರಿಸಿಕೊಳ್ಳುವುದು ಸರಿಯಲ್ಲ. ಹಿರಿಯ ಸದಸ್ಯರನ್ನು ಅಲ್ಲಿ ಕೂರಿಸಿಕೊಂಡು ಇಲ್ಲಿ ಮಾತನಾಡುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ: ವಿನಂತಿ ಮಾಡುತ್ತೇನೋ ಅಥವಾ ಸರ್ಕಾರಕ್ಕೆ ಏನು ಹೇಳಬೇಕು ಅದನ್ನೇ ಹೇಳುತ್ತಿದ್ದೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ನೀರು ಕೊಟ್ಟರು, ನೀರು ಕೊಡುವುದಕ್ಕೆ ಕಾರಣ ಅವರ ಮೇಲೆ ಹಾಕಿದರು. ಈಗ ನೀರು ಎಂದರೆ ಸೀಮೆಎಣ್ಣೆ ರೂಪವಾಗಿದೆ. ಸೀಮೆಎಣ್ಣೆ ಹಾಕಿದರು. ಅದಕ್ಕೆ ನೀವು ಬೆಂಕಿ ಕಡ್ಡಿ ಗೀರಿದ್ದೀರಿ. ನೀವು ಇದನ್ನು ಸಾಧನೆ ಮಾಡುವುದಕ್ಕೆ ಪ್ರೂವ್ ಮಾಡುವುದಕ್ಕೆ ಹೊರಟಿದ್ದೀರಿ. ಇದನ್ನು ಮಾತ್ರ ಇಡೀ ಕರ್ನಾಟಕದ ಜನ ಅಕ್ಷಮ್ಯ ಅಪರಾಧ ಎಂದು ಹೇಳುತ್ತೇನೆ. ಅದಕ್ಕೆ ಧ್ವನಿಗೂಡಿಸಿ ನಾವು ಧರಣಿ ಕುಳಿತು ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ ಧರಣಿ ಕೂರುತ್ತಿದ್ದೇವೆ.

(ಬಿಜೆಪಿ.ಯ ಮಾನ್ಯ ಸದಸ್ಯರುಗಳು ಧರಣಿ ಕುಳಿತರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಹಾಗೆ ಹೇಳಿಲ್ಲವೆಂದು ಹೇಳಬೇಕಾಗುತ್ತದೆ. ಕೆಲವು ವಿಷಯಗಳನ್ನು ಈಗಾಗಲೇ ಮಾನ್ಯ ವೀರಪ್ಪ ಮೊಯಿಲಿಯವರು ಕ್ಲಾರಿಫೈ ಮಾಡಿದ್ದಾರೆ.

ಅಧ್ಯಕ್ಷರು : ಅವರು ಧರಣಿ ಮಾಡುವುದು, ನೀವು ಮಾತನಾಡುತ್ತಿರುವುದು ಸರಿಯೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವೂ ಕೂಡ ಧರಣಿಗೆ ಹೋಗುತ್ತಿದ್ದೇವೆ. ಏಕೆಂದರೆ ಅವರು ಇವತ್ತು ನಾವು ರೈಸ್ ಮಾಡಿದಂಥ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರ ಕೊಡಲಿಲ್ಲ. ೫ ಟಿಎಂಸಿ ನೀರನ್ನು ಏತಕ್ಕೆ ಬಿಟ್ಟರು, ಅದರ ಬಗ್ಗೆ ಹೇಳಲಿಲ್ಲ. ಪದೇ ಪದೇ ಡಿಸ್ಟ್ರೆಸ್ ಫಾರ್ಮುಲ ನಿಮ್ಮದು ಎಂದು ನಮ್ಮ ಮೇಲೆ ಅವರು ಅಪಾದನೆ ಮಾಡುತ್ತಿದ್ದಾರೆ.

(ಕಾಂಗ್ರೆಸ ಮಾನ್ಯ ಸದಸ್ಯರುಗಳು ಧರಣಿಗೆ ಕುಳಿತರು)

## ಪ್ರಕಟಣೆ

ಅಧ್ಯಕ್ಷರು : ದಿನಾಂಕ 30ನೇ ಆಗಸ್ಟ 1995ರಂದು ಪ್ರಶ್ನೋತ್ತರ ವೇಳೆ ನಡೆಯುವ ಕಾರಣ ಸದನದಲ್ಲಿ ಉತ್ತರಿಸುವ ಹನ್ನೊಂದನೆ ಪಟ್ಟಿಯಲ್ಲಿರುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 95 ಪ್ರಶ್ನೆಗಳ ಪೈಕಿ 85 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತೇನೆ.

## ಬನ್ನೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ

1832 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

*ಅ) ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*